RNU AIR DHARWAD

DECEMBER 28, 2024

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದಿದವರು: ಹರ್ಷವರ್ಧನ ಶೀಲವಂತ

<><><>

ಮುಖ್ಯಾಂಶಗಳು:

<><><>

- ಹೊಸ ದಿಲ್ಲಿಯಲ್ಲಿ, ಇಂದು ಬೆಳಗ್ಗೆ 11.45ಕ್ಕೆ, ಮಾಜಿ ಪ್ರಧಾನಮಂತ್ರಿ ಮನಮೋಹನ್ ಸಿಂಗ್ ಅವರ, ಪಾರ್ಥಿವ ಶರೀರದ, ಅಂತ್ಯಕ್ರಿಯೆ.
- ಹುಬ್ಬಳ್ಳಿಯ, ಶ್ರೀ ಮೂರುಸಾವಿರ ಮಠದಲ್ಲಿ, ಇಂದು ಮತ್ತು ನಾಳೆ, 'ಗೆಡ್ಡೆ–ಗೆಣಸು ಬೆಳೆಸಲು, ರೈತರಿಗೆ ತರಬೇತಿ ಶಿಬಿರ.
- 8ನೇ ಆವೃತ್ತಿಯ, 'ಪರೀಕ್ಷಾ ಪೆ ಚರ್ಚಾ', ಜನವರಿ 14ರ ವರೆಗೆ ಹೆಸರು ನೋಂದಾಯಿಸಲು, ಅವಕಾಶ.
- 'ಮನ್ ಕಿ ಬಾತ್'; ನಾಳೆ, ಭಾನುವಾರ ಬೆಳಗ್ಗೆ 11 ಗಂಟೆಗೆ, ಪ್ರಧಾನಮಂತ್ರಿಯವರಿಂದ, ದೇಶದ ಜನತೆಯನ್ನುದ್ದೇಶಿಸಿ, ಮಾತು.

<><><>

ಈಗ ವಾರ್ತೆಗಳ ವಿವರ

<><><>

ಮಾಜಿ ಪ್ರಧಾನಮಂತ್ರಿ, ಮುತ್ಸದ್ದಿ ಹಾಗೂ ಖ್ಯಾತ ಅರ್ಥಶಾಸ್ತ್ರಜ್ಞ, ಡಾಕ್ಟರ್ ಮನಮೋಹನ್ ಸಿಂಗ್ ಅವರ, ಪಾರ್ಥೀವ ಶರೀರದ ಅಂತ್ಯಕ್ರಿಯೆ, ಇಂದು ಬೆಳಗ್ಗೆ 11.45ಕ್ಕೆ ಹೊಸ ದಿಲ್ಲಿಯ ನಿಗಮ್ ಬೋಧ್ ಘಾಟ್‌ನಲ್ಲಿ, ಸಿಖ್ ವಿಧಿವಿಧಾನಗಳಂತೆ ಹಾಗೂ ಸಕಲ ಸರ್ಕಾರಿ ಗೌರವಗಳೊಂದಿಗೆ ನೆರವೇರಲಿದೆ. ಇಂದು ಬೆಳಗ್ಗೆ, 8 ಗಂಟೆಯ ವರೆಗೆ ದಿಲ್ಲಿಯ ಮನಮೋಹನ್ ಸಿಂಗ್ ಅವರ ನಿವಾಸದ ಮುಂದೆ, ಸಾರ್ವಜನಿಕರ ದರ್ಶನಕ್ಕಾಗಿ, ವ್ಯವಸ್ಥೆ ಮಾಡಲಾಗಿದೆ.

ಬಳಿಕ, ಪಾರ್ಥೀವ ಶರೀರವನ್ನು ಎ.ಐ.ಸಿ.ಸಿ. ಪ್ರಧಾನ ಕಚೇರಿಗೆ ಕೊಂಡೊಯ್ಯಲಾಗುತ್ತಿದೆ. ಈ ಬೆಳಗ್ಗೆ 9 ಗಂಟೆ 30 ನಿಮಿಷದ ವರೆಗೆ, ಸಾರ್ವಜನಿಕರು ಮತ್ತು ಕಾಂಗ್ರೆಸ್ ಕಾರ್ಯಕರ್ತರು ಶ್ರದ್ಧಾಂಜಲಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ ಎಂದು, ಎ.ಐ.ಸಿ.ಸಿ. ಪ್ರಧಾನ ಕಾರ್ಯದರ್ಶಿ, ಕೆ.ಸಿ.ವೇಣುಗೋಪಾಲ್, ಎಕ್ಸ್ ಮಾಧ್ಯಮ ಖಾತೆಯಲ್ಲಿ, ಮಾಹಿತಿ ನೀಡಿದ್ದಾರೆ.

<><><>

ಪಾರ್ಥಿವ ಶರೀರದ ಅಂತ್ಯಕ್ರಿಯೆ ಪೂರ್ಣಗೊಳ್ಳುವ ವರೆಗೆ, ಆಕಾಶವಾಣಿ ಹಾಗೂ ದೂರದರ್ಶನ ತಮ್ಮ ಎಲ್ಲ ವಾಹಿನಿಗಳ ಮೂಲಕ, ನೇರ ಪ್ರಸಾರ ಮಾಡಲಿವೆ. ಅಂತಿಮ ವಿಧಿ–ವಿಧಾನಗಳು ಮುಗಿದ ಬಳಿಕ, ಮಧ್ಯಾಹ್ನ 12 ಗಂಟೆಯ ಪ್ರದೇಶ ಸಮಾಚಾರ, ಬಿತ್ತರಗೊಳ್ಳಲಿದೆ.

<><><>

ಇಂದು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಸಂಸ್ಥಾಪನಾ ದಿನ. 1885ರ ಡಿಸೆಂಬರ್ 28 ರಂದು, ಮುಂಬೈಯಿಯ ಗೋಕುಲದಾಸ ತೇಜಪಾಲ ಸಂಸ್ಕೃತ ಮಹಾವಿದ್ಯಾಲಯದಲ್ಲಿ, ಉಮೇಶಚಂದ್ರ ಬ್ಯಾನರ್ಜಿ ಅವರ ಅಧ್ಯಕ್ಷತೆಯಲ್ಲಿ, ಎ.ಐಸಿ.ಸಿ. ಸ್ಥಾಪನೆಗೊಂಡಿತು.

<><><>

ಧಾರವಾಡ ಜಿಲ್ಲೆ ಹುಬ್ಬಳ್ಳಿಯ, ಶ್ರೀ ಮೂರುಸಾವಿರ ಮಠದ ಸಭಾಂಗಣದಲ್ಲಿ ಇಂದು ಮತ್ತು ನಾಳೆ, 'ಗೆಡ್ಡೆ–ಗೆಣಸು ಬೆಳೆಸುವ ತರಬೇತಿ ಮೇಳ' ಆಯೋಜಿತವಾಗಿದೆ. ಧಾರವಾಡದ ಗೆಡ್ಡೆ–ಗೆಣಸು ಸಂಶೋಧನಾ ಕೇಂದ್ರದ, ಹಳದಿ, ಕೆಂಪು ಹಾಗೂ ಬಿಳಿ ಸಿಹಿ ಗೆಣಸು, ಮೇಳದ ವಿಶೇಷ ಆಕರ್ಷಣೆಯಾಗಿವೆ. ಹಾವೇರಿ ಜಿಲ್ಲೆ ಶಿಗ್ಗಾಂವ ತಾಲೂಕು ಮುಗಳಿ ಗ್ರಾಮದ, ಯುವ ರೈತ ನಾಗರಾಜ ಶಿವಾನಂದ ಹುಲಗೂರ, ಮೂರೂ ಬಣ್ಣಗಳ ಗೆಣಸು ಬೆಳೆದಿದ್ದು, ತಮ್ಮ ನರ್ಸರಿಯಿಂದ ಅಪರೂಪದ ಈ ಬಳ್ಳಿಗಳನ್ನು ಮಾರಾಟಕ್ಕೂ ತರಲಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ ಹೆಚ್ಚಿನ ಮಾಹಿತಿ ನೀಡಿದ್ದಾರೆ, ನಾಗರಾಜ ಹುಲಗೂರ.

<><><>

ನಾಗರಾಜ ಹುಲಗೂರ ಧ್ವನಿ 40 ಸೆಕೆಂದುಗಳು

<><><>

ಸ್ವಾಭಿಮಾನಿ ಹಾಗೂ ಸೌಹಾರ್ದತೆಯ, ಮಾದರಿ ಬದುಕಿಗೆ ಹೆಸರಾದ, ಹವ್ಯಕ ಸಮುದಾಯ, ವಿಶ್ವ ಸಮ್ಮೇಳನದ ಮೂಲಕ, ತನ್ನ ವೈಶಿಷ್ಟ್ಯವನ್ನು ಜಗತ್ತಿಗೆ ಪರಿಚಯಿಸಿದೆ ಎಂದು, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದ್ದಾರೆ. ಬೆಂಗಳೂರಿನ ಅರಮನೆ ಮೈದಾನದಲ್ಲಿ, ಮೂರು ದಿನಗಳ ಕಾಲ ಆಯೋಜಿತ, ತೃತೀಯ ವಿಶ್ವ ಹವ್ಯಕ ಸಮ್ಮೇಳನದ, ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿ, ಅವರು, ಮಾತನಾಡಿದರು. ಹವ್ಯಕ ಸಮುದಾಯ ದೇಶದ ಚಿಂತನೆಗೆ ಪೂರಕವಾಗಿ ಬದುಕುತ್ತಿರುವ ಮಾದರಿ ಸಮಾಜ ಎಂದು, ಅವರು ಶ್ಲಾಘಿಸಿದರು.

<><><>

ಸಾನಿಧ್ಯವನ್ನು ಶ್ರೀ ರಾಘವೇಶ್ವರ ಭಾರತೀ ಸ್ವಾಮೀಜಿ, ಶ್ರೀ ಸುಬುಧೇಂದ್ರ ತೀರ್ಥರು ಶ್ರೀ ಹಾಗೂ ಶ್ರೀ ಯತಿರಾಜ ಸ್ವಾಮೀಜಿ ವಹಿಸಿದ್ದರು.

<><><>

ಡಿ.ವಿ.ಸದಾನಂದಗೌಡ, ಪ್ರಲ್ಹಾದ ಜೋಶಿ, ವಿಶ್ವೇಶ್ವರ ಹೆಗಡೆ ಕಾಗೇರಿ ಸೇರಿದಂತೆ, ಗಣ್ಯರು ಭಾಗವಹಿಸಿದ್ದರು.

<><><>

ಧಾರವಾಡ ಜಿಲ್ಲೆ, ಹುಬ್ಬಳ್ಳಿಯ ಅಚ್ಚವ್ವನ ಕಾಲೋನಿಯಲ್ಲಿ, ಎಲ್.ಪಿ.ಜಿ. ಅನಿಲ ಸಿಲಿಂಡರ್ ಸೋರಿ, ಉಂಟಾದ ಬೆಂಕಿ ಅವಘಡದಲ್ಲಿ, ಗಾಯಗೊಂಡಿದ್ದ ಒಂಬತ್ತು ಜನ ಅಯ್ಯಪ್ಪ ಮಾಲಾಧಾರಿಗಳ ಪೈಕಿ, ಮತ್ತೆ ಓರ್ವರು ನಿನ್ನೆ ಅಸುನೀಗಿದ್ದಾರೆ. ಸಾವಿನ ಸಂಖ್ಯೆ ನಾಲ್ಕಕ್ಕೇರಿದೆ.

<><><>

ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ಆಸ್ಪತ್ರೆಗೆ ಭೇಟಿ ನೀಡಿ, ಮೃತರ ಕುಟುಂಬಕ್ಕೆ ಸಾಂತ್ವನ ಹೇಳಿದರು. ಐದು ಲಕ್ಷ ರೂಪಾಯಿ ಪರಿಹಾರ ಪ್ರಕಟಿಸಿದರು. ಗಂಭೀರವಾಗಿ ಗಾಯಗೊಂಡ ಐವರಿಗೆ, ಅತ್ಯುತ್ತಮ ಚಿಕಿತ್ಸೆ ನೀಡಲಾಗುತ್ತಿದೆ. ಇಂತಹ ಬೆಂಕಿ ಅವಘಡಗಳು ಸಂಭವಿಸದಂತೆ, ಮುನ್ನೆಚ್ಚರಿಕೆ ವಹಿಸುವ ಬಗ್ಗೆ, ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಗುವುದು ಎಂದರು.

<><><>

ಹುಬ್ಬಳ್ಳಿಯ ಕೆ.ಎಂ.ಸಿ.– ಆರ್.ಐ. ನಿರ್ದೇಶಕ, ಡಾಕ್ಟರ್ ಎಸ್.ಎಫ್. ಕಮ್ಮಾರ ಮಾಹಿತಿ ನೀಡಿ, ಬಾಲಕ ವಿನಾಯಕ ಚಿಕಿತ್ಸೆಗೆ ಸ್ಪಂದಿಸುತ್ತಿದ್ದು, ಉಳಿದ ನಾಲ್ವರ ಸ್ಥಿತಿ ಇನ್ನೂ ಗಂಭೀರವಾಗಿದೆ. ತಜ್ಞ ವೈದ್ಯರಿಂದ ಚಿಕಿತ್ಸೆ ಮುಂದುವರೆದಿದೆ ಎಂದರು.

<><><>

ಈಗ ಜಾಹಿರಾತು..

ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..

(10 ಸೆಕೆಂದುಗಳು ದಿನದರ್ಶಿಕೆ)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ **x** ಖಾತೆ **@airnews_dharwad** ಹಾಗೂ

ನಮ್ಮ ಫೇಸ್ಬುಕ್ ಖಾತೆ **Airrnu Dharwad** ಅನುಸರಿಸಿ.

<><><>

8ನೇ ಆವೃತ್ತಿಯ, 'ಪರೀಕ್ಷಾ ಪೆ ಚರ್ಚಾ', ಜನವರಿಯಲ್ಲಿ ಹೊಸ ದಿಲ್ಲಿಯಲ್ಲಿ ನಡೆಯಲಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ, ಪರೀಕ್ಷೆ ಒತ್ತಡ ಮತ್ತು ಭಯ ನಿವಾರಿಸುವ, ವಿಶಿಷ್ಟ ಸಂವಾದ ಕಾರ್ಯಕ್ರಮಕ್ಕೆ, ನೋಂದಣಿ ಪ್ರಕ್ರಿಯೆ ಪ್ರಾರಂಭವಾಗಿದೆ. **innovateindia1.mygov.in** ಪೋರ್ಟಲ್‌ನಲ್ಲಿ, ಜನವರಿ 14ರ ವರೆಗೆ ಹೆಸರು ನೋಂದಾಯಿಸಲು, ಅವಕಾಶವಿದೆ. 6 ರಿಂದ 12 ನೇ ತರಗತಿಯ ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಪೋಷಕರಿಗೆ, ಬಹುವಿಧ ಆಯ್ಕೆ ಮಾದರಿ ರಸಪ್ರಶ್ನೆ ಸ್ಪರ್ಧೆ ಆಯೋಜಿಸಲಾಗಿದೆ ಎಂದು, ಶಿಕ್ಷಣ ಸಚಿವಾಲಯ ತಿಳಿಸಿದೆ.

<><><>

ದಕ್ಷಿಣಕನ್ನಡ ಜಿಲ್ಲೆ, ಮಂಗಳೂರಿನ ಉಳ್ಳಾಲದ ಯುವ ಪ್ರತಿಭೆ, ಸಿಂಧೂರಾ ರಾಜ ಅವರು, ಪ್ರಧಾನಮಂತ್ರಿ ರಾಷ್ಟ್ರೀಯ ಬಾಲ ಪುರಸ್ಕಾರಕ್ಕೆ ಭಾಜನರಾಗಿದ್ದಾರೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದ, ಹೊಸ ದಿಲ್ಲಿಯ ವಿಜ್ಞಾನ ಭವನದಲ್ಲಿ ಅವರು ಈ ಪ್ರಶಸ್ತಿ ಸ್ವೀಕರಿಸಿದರು. ಬೆಂಗಳೂರು ಇಂದಿರಾ ನಗರದ ನ್ಯಾಷನಲ್ ಪಬ್ಲಿಕ್ ಸ್ಕೂಲ್ ನಲ್ಲಿ 11ನೇ ತರಗತಿಯಲ್ಲಿ ಓದುತ್ತಿರುವ, ಸಿಂಧೂರಾ ವೈಜ್ಞಾನಿಕ ಸಂಶೋಧನೆಗಾಗಿ, ಅಮೆರಿಕದ ಪ್ರತಿಷ್ಠಿತ ವರ್ಲ್ಡ್ ಸೈನ್ಸ್ ಸ್ಕಾಲರ್‌ಶಿಪ್ ಗಳಿಸಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ, ಸಿಂಧೂರಾ ರಾಜ ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

ಸಿಂಧೂರ ರಾಜ ಧ್ವನಿ 40 ಸೆಕೆಂದುಗಳು

<><><>

ಧಾರವಾಡದ, ಪದ್ಮಶ್ರೀ ಸಂಗೀತ ಪ್ರತಿಷ್ಠಾನದ ರಜತ ಮಹೋತ್ಸವದ ಅಂಗವಾಗಿ, ಇಂದು ಸಂಜೆ 4 ಗಂಟೆಗೆ, ಆಲೂರ ವೆಂಕಟರಾವ ಸಭಾಭವನದಲ್ಲಿ, ಪಂಡಿತ್ ಭೀಮಸೇನ ಮಾಧವ ರಾಷ್ಟ್ರೀಯ ಸಂಗೀತೋತ್ಸವ ಆಯೋಜಿತವಾಗಿದೆ. ಹಿರಿಯ ಗಾಯಕಿ, ವಿದುಷಿ ಸಂಗೀತಾ ಕಟ್ಟಿ ಕುಲಕರ್ಣಿ ಅವರಿಗೆ, 'ಮಾಧವ ಸ್ವರನಿಧಿ' ಪ್ರಶಸ್ತಿಯನ್ನು, ಆಕಾಶವಾಣಿಯ ನಿವೃತ್ತ ಉಪ ಮಹಾನಿರ್ದೇಶಕ ಚೇತನಕುಮಾರ ನಾಯ್ಕ್ ಹಾಗೂ ನಿವೃತ್ತ ಹಿರಿಯ ಉದ್ಘೋಷಕ ಶಶಿಧರ ನರೇಂದ್ರ ಪ್ರದಾನ ಮಾಡಲಿದ್ದಾರೆ. ಖ್ಯಾತ ಹಿಂದೂಸ್ಥಾನಿ ಗಾಯಕ, ಪಂಡಿತ ಶೇಷಗಿರಿ ಗುಡಿ ಅವರು ಅಧ್ಯಕ್ಷತೆ ವಹಿಸಲಿದ್ದಾರೆ ಎಂದು, ಖ್ಯಾತ ಗಾಯಕಿ ಭಾರ್ಗವಿ ವೆಂಕಟೇಶ ಕುಲಕರ್ಣಿ ತಿಳಿಸಿದ್ದಾರೆ.

<><><>

ಆಕಾಶವಾಣಿಯ ಮಾಸಿಕ ಜನಪ್ರಿಯ ಕಾರ್ಯಕ್ರಮ, 'ಮನ್ ಕಿ ಬಾತ್' ನಲ್ಲಿ ನಾಳೆ 29 ರಂದು, ಭಾನುವಾರ ಬೆಳಗ್ಗೆ 11 ಗಂಟೆಗೆ, ಪ್ರಧಾನಮಂತ್ರಿ ನರೇಂದ್ರ ಮೋದಿ, ದೇಶ, ವಿದೇಶಗಳಲ್ಲಿನ ಭಾರತೀಯರೊಂದಿಗೆ ತಮ್ಮ ಚಿಂತನೆಗಳನ್ನು ಹಂಚಿಕೊಳ್ಳಲಿದ್ದಾರೆ. ಇದು ಮನದ ಮಾತಿನ 117ನೇ ಆವೃತ್ತಿಯಾಗಿದೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು

<><><>

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಅಂಗಾಂಗ ದಾನಕ್ಕೆ, **notto.abdm.gov.in** ಮೂಲಕ, ಹೆಸರು ನೋಂದಾಯಿಸಲು, ಮನವಿ ಮಾಡಿದೆ.

<><><>

ಶಿವಮೊಗ್ಗ ಜಿಲ್ಲೆ, ತೀರ್ಥಹಳ್ಳಿ ತಾಲೂಕು ಕುಪ್ಪಳಿಯ ಕವಿಶೈಲದಲ್ಲಿ, ರಾಷ್ಟ್ರಕವಿ ಕುವೆಂಪು ಅವರ, 120ನೇ ಜನ್ಮ ದಿನದ ಅಂಗವಾಗಿ, ನಾಳೆ 29 ರಂದು, ಕವಿ ನಮನ ಹಾಗೂ ವಿಶ್ವ ಮಾನವ ದಿನಾಚರಣೆ ಆಯೋಜಿತವಾಗಿದೆ.

<><><>

ಶಿವಮೊಗ್ಗ ಜಿಲ್ಲೆ, ಸಾಗರ ತಾಲೂಕಿನ, ಜೋಗ ಜಲಪಾತದ ಮುಖ್ಯ ದ್ವಾರದ ಕಾಮಗಾರಿ ಹಿನ್ನೆಲೆ, ಜನೆವರಿ 1 ರಿಂದ ಮಾರ್ಚ್ 15ರ ವರೆಗೆ, ಪ್ರವಾಸಿಗರಿಗೆ ಪ್ರವೇಶ ನಿರ್ಬಂಧಿಸಿ, ಜಿಲ್ಲಾಡಳಿತ ಆದೇಶಿಸಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಹೊಸ ದಿಲ್ಲಿಯಲ್ಲಿ, ಇಂದು ಬೆಳಗ್ಗೆ 11.45ಕ್ಕೆ, ಮಾಜಿ ಪ್ರಧಾನಮಂತ್ರಿ ಮನಮೋಹನ್ ಸಿಂಗ್ ಅವರ, ಪಾರ್ಥಿವ ಶರೀರದ, ಅಂತ್ಯಕ್ರಿಯೆ.
- ಹುಬ್ಬಳ್ಳಿಯ, ಶ್ರೀ ಮೂರುಸಾವಿರ ಮಠದಲ್ಲಿ, ಇಂದು ಮತ್ತು ನಾಳೆ, 'ಗೆಡ್ಡೆ-ಗೆಣಸು ಬೆಳೆಸಲು, ರೈತರಿಗೆ ತರಬೇತಿ ಶಿಬಿರ.
- 8ನೇ ಆವೃತ್ತಿಯ, 'ಪರೀಕ್ಷಾ ಪೆ ಚರ್ಚಾ', ಜನವರಿ 14ರ ವರೆಗೆ ಹೆಸರು ನೋಂದಾಯಿಸಲು, ಅವಕಾಶ.
- 'ಮನ್ ಕಿ ಬಾತ್'; ನಾಳೆ, ಭಾನುವಾರ ಬೆಳಗ್ಗೆ 11 ಗಂಟೆಗೆ, ಪ್ರಧಾನಮಂತ್ರಿಯವರಿಂದ, ದೇಶದ ಜನತೆಯನ್ನುದ್ದೇಶಿಸಿ, ಮಾತು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>

ಹರ್ಷ